SRI D. K. NAIKAR —This has been clear by the Honourable Deputy Speaker. Sri Krishnan has also been convinced that it is not a Legislature Committee. Members of this House may be there in the Commission which was constituted as per Government Notification. There is clear distinction.

SRI M. S. KRISHNAN.—Iam only saying that the Honourable Minister should not have chosen to speak about this report before it was placed in the House. This amounts to a breach of privilege.

MR. DEPUTY SPARKER.—It is not a breach of privilege, does not pertain to the business of the House. If the Honourable Member is very particular about this matter or interested in this matter, there are so many ways open to him. Of course it is his discretion. Now, I do not want to hear anything further in this matter. Let us go to the next item.

2-00 P.M.

Replies due to Questions etc from Government

ಶ್ರೀ ಜೆ. ಎಲ್ ಕಬಾಡಿ.—ನಾವು ಏನು ಗಮನ ಸೆಳೆಯುವ ಸೂಚನೆಗಳನ್ನು ಮತ್ತು ಪ್ರಶ್ನೆಗಳನ್ನು ಕಳುಹಿಸಿದ್ದೇವೆ ಆದಕ್ಕೆ ಬೇಗ ಬೇಗ ಉತ್ತರವನ್ನು ತರಿಸಿಕೊಡಬೇಕಾಗಿತ್ತು. ಈಪ್ರೊತ್ತಿನ ದಿವಸದ ಪ್ರಶ್ನಾವಳಿಯನ್ನು ನೋಡಿದರೆ ಕೇವಲ ೫ ಪ್ರಶ್ನೆಗಳನ್ನು ಮಾತ್ರ ನಮ್ಮ ಮುಂದೆ ಇಟ್ಟಿದ್ದಾರೆ. ಇದು ಏನು ತೋರಿಸುತ್ತದೆ ಎಂದರೆ ಸರ್ಕಾರ ನಾವು ಕಳುಹಿಸತಕ್ಕಂಥಾ ಪ್ರಶ್ನೆಗಳಿಗೆ ಮತ್ತು ಗಮನ ಸೆಳೆಯುವ ಸೂಚನೆಗಳಿಗೆ ಎಷ್ಟರ ಮಟ್ಟಿಗೆ ಆಲಕ್ಷ್ಯ ತೋರಿಸುತ್ತಾ ಇದೆ ಎನ್ನುವುದು ಗೊತ್ತಾಗುತ್ತಾ ಇದೆ, ನಾವು ಕಳುಹಿಸಿರತಕ್ಕಂಥಾ ಅನೇಕ ಪ್ರಶ್ನೆಗಳಿಗೆ ಮತ್ತು ಗಮನ ಸೆಳೆಯುವ ಸೂಚನೆಗಳಿಗೆ ಉತ್ತರ ತರಿಸಿಕೊಟ್ಟಿಲ್ಲ. ಕೇಳಿದರೆ ಯಾವುದಕ್ಕೂ ಉತ್ತರ ಕೊಡದೆ ಸುಮ್ಮನೆ ಕೂತುಕೊಳ್ಳುತ್ತಾರೆ. ಈ ಬಗ್ಗೆ ಸರ್ಕಾರಕ್ಕೆ ಎಷ್ಟೋ ರೀತಿಯಲ್ಲಿ ಹೇಳಿದರೂ ಕೂಡ ಇದರ ಬಗ್ಗೆ ಇನ್ನೂ ಎಚ್ಚರಿಕೆ ವಹಿಸಿಲ್ಲಾ. ಆದುದರಿಂದ ಮಾನ್ಯ ಅಧ್ಯಕ್ಷರು ಈ ಬಗ್ಗೆ ಒಂದು ಎಚ್ಚರಿಕೆ ನೀಡಿದರೆ ಸರ್ಕಾರಕ್ಕೆ ಇದರ ಎಚ್ಚರಿಕೆ ಇದೆಯೋ ಇಲ್ಲವೇ ಅನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಆದುದರಿಂದ ಇನ್ನು ಮುಂದಾದರೂ ಕೂಡ ನಾವು ಕಳುಹಿಸಿರತಕ್ಕಂಥಾ ಪ್ರಶ್ನೆಗಳಿಗೆ ಮತ್ತು ಗಮನ ಸೆಳೆಯುವ ಸೂಚನೆಗಳಿಗೆ ತ್ವರಿತವಾಗಿ ಉತ್ತರಗಳನ್ನು ಒದಗಿಸಿ ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಸಿ ಬೈರೇಗೌಡ.—ಈ ಪೊತ್ತು ಹೊರಗೆ ಎಲ್ಲಿ ಹೋಗಿ ನೋಡಿದರೂ ಆಫೀಸುಗಳಲ್ಲಿ ಹೋಗಿ ನೋಡಿದರೆ ದಕ್ಷತೆ ಮತ್ತು ಶಿಸ್ತು ಎಂದು ಪ್ರಿಂಟ್ ಮಾಡಿಸಿಬಿಟ್ಟಿದ್ದಾರೆ. ಹೀಗಿರುವಾಗ ನಾನು ಕೇಳುತ್ತೆನೆ ಈ ಸರ್ಕಾರಕ್ಕೆ ಏನಾದರೂ ದಕ್ಷತೆ ಮತ್ತು ಶಿಸ್ತು ಇದೆಯೇ ಎಂದು. ಏತಕ್ಕೆಂದರೆ ನಾನು ರೂಲ್ ೩೧೨ರ ಪ್ರಕಾರ ಕಾಲಿಂಗ್ ಅಟೆನ್‌ಷನ್ ಒಂದನ್ನು ಕಳುಹಿಸಿದ್ದೇನೆ. ಇದನ್ನು ಕಳೆದ ೬-೫ ಸೆಷನ್‌ನಿಂದಲೂ ಕೂಡ ರಿನೊ ಮಾಡುತ್ತಿದ್ದೇವೆ. ಅಲ್ಲದೆ ಮುಖ್ಯವಾದಂಥಾ ಪ್ರಶ್ನೆಗಳಿಗೆ ಇನ್ನು ಉತ್ತರವೇ ಬಂದಿಲ್ಲ. ಹೀಗಿರುವಾಗ ಸರ್ಕಾರದಲ್ಲಿ ದಕ್ಷತೆ ಮತ್ತು ಶಿಸ್ತು ಇದೆಯೇ ಎಂದು ನಾನು ಕೇಳಬೇಕಾಗಿದೆ. ಇದರ ಬಗ್ಗೆ ನನಗಂತೂ ಅರ್ಥವಾಗುತ್ತಾ ಇಲ್ಲ. ಇಲ್ಲವೇ ಸರ್ಕಾರ ಒಪ್ಪಿಕೊಳ್ಳಲಿ ನಮಗೆ ದಕ್ಷತೆ ಇಲ್ಲ ಮತ್ತು ಶಿಸ್ತು ಇಲ್ಲ ಎಂದು. ಆವಾಗ ನಾವು ಜನರಿಗೆ ಏನಾದರೂ ಒಂದು ಹೇಳಬಹುದು. ಸರ್ಕಾರದವರು ಭರವಸೆ ಕೊಟ್ಟು ಹಾಗೆ ನಡೆಯುತ್ತಾ ಇಲ್ಲ ಆದುದರಿಂದ ತಾವು ಇದರ ಬಗ್ಗೆ ಸರ್ಕಾರಕ್ಕೆ ಛೀಮಾರಿ ಹಾಕಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ದಕ್ಷತೆ ಮತ್ತು ಶಿಸ್ತು ಎಂದು ಅಷ್ಟು ಮಾತ್ರ ಬೋರ್ಡ್ ಮೇಲೆ ಹಾಕಿಲ್ಲ, ದಕ್ಷತೆ ಮತ್ತು ಶಿಸ್ತು ಇರಬೇಕು ಎಂದು ಬೋರ್ಡ್ ಮೇಲೆ ಹಾಕಿದ್ದಾರೆ.

MR. DEPUTY SPEAKER.— The Honourable Speaker has impressed upon the Government to see that replies are sent as quickly as possible. I have also stressed this matter. What more can I say? All that I can say is still more attention should be given and Government should see that answers are furnished speedily. As for as the Legislature is concerned as soon as answers are received, we have been putting them in the list.

ಶ್ರೀ ಸಿ. ಬೈರೇಗೌಡ – ಅಧ್ಯಕ್ಷರೇ ಇದು ನಮ್ಮ ಹಕ್ಕು ಭಾದ್ಯತಾ ಪ್ರಶ್ನೆ. ನಾವು ಪ್ರಶ್ನೆಯನ್ನು ಕೇಳಿದಾಗ ೧೫ ದಿವಸಗಳಲ್ಲಿ ಉತ್ತರ ತರಿಸಿಕೊಡಬೇಕು ಎಂದು ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಇದೆ. ಸರ್ಕಾರದವರು ಸದಸ್ಯರಿಗೆ ಈ ರೀತಿ ಮಾಡಿದರೆ ಇದು ಸದಸ್ಯರ ಹಕ್ಕುಭಾದ್ಯತೆಗೆ ಚ್ಯುತಿ ಬಂದಂತಾಗುವುದಲ್ಲದೆ ಈ ಸದನದ ಗೌರವಕ್ಕೂ ಕೂಡ ಚ್ಯುತಿ ಬಂದಂತಾಗುತ್ತದೆ. ಆದುದರಿಂದ ಅವರು ಇದನ್ನು ದಯವಿಟ್ಟು ಗಮನಿಸಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇವೆ.

SRI M. S. KRISHNAN.—The chair was pleased to make good suggestion. Mr. Deputy Speaker said that the Speaker has also brought it to the notice of the Government. But Government seems to be like a stone. They are not prepared to tell the Honourable Speaker or the Honourable Deputy Speaker that they will answer to this the only Minister who is competent to reply is Sri D. K. Naikar. He also does not say anything. What is the worth of all the remarks and castigations made by Chair?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸ್ವಾಮಿ ಇದು ಹಳೆಯ ರೋಗ. ಆದುದರಿಂದ ಇದನ್ನು ಆಷ್ಟು ಸುಲಭವಾಗಿ ಒಗೆಹರಿಸುವುದಕ್ಕಾಗುವುದಿಲ್ಲ. ಇದಕ್ಕೆ ಶಸ್ತ್ರ ಚಿಕಿತ್ಸೆಯೇ ಆಗಬೇಕು ಎಂದು ನಾವು ಅಪೇಕ್ಷೆ ಮಾಡುತ್ತಿದ್ದೇವೆ. ಆದುದರಿಂದ ಸ್ವಾಮಿ ನಾನು ಹೇಳುವುದು ಇದಕ್ಕೆ ಯಾವ ಮಂತ್ರಿಗಳು ತಪ್ಪಿತಸ್ಥರು ಎಂದು ತಮ್ಮ ಗಮನಕ್ಕೆ ಬರುತ್ತದೋ ಅಂಥವರ ಬಗ್ಗೆ ಕಟ್ಟುನಿಟ್ಟಾಗಿ ಕ್ರೂರವಾದ ರೀತಿಯಲ್ಲಿ ಕ್ರಮ ತೆಗೆದುಕೊಂಡರೆ ಮಾತ್ರ ಈ ಸದನದ ಕಾರ್ಯಕಲಾಪಗಳು ಚೆನ್ನಾಗಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ ಮಾನ್ಯ ಕೃಷ್ಣನ್‌ರವರು ಹೇಳಿದ ಹಾಗೆ ಕಳೆದ ಸಾರಿ ಮಾನ್ಯ ಮಂತ್ರಿಗಳು ಏನು ಆಶ್ವಾಸನೆ ಕೊಟ್ಟರು ತಾರೋ ಆಶ್ವಾಸನೆ ಆಶ್ವಾಸನೆಯಾಗಿಯೇ ಉಳಿದಿದೆ. ಅದರ ಬಗ್ಗೆ ಎಚ್ಚರಿಕೆಯೇ ಬರಲಿಲ್ಲ. ಹೀಗೆ ಭರವಸೆ ಕೊಟ್ಟರೆತಕ್ಕಂಥಾದ್ದನ್ನು ಏನು ಮಾಡಬೇಕಾಗುತ್ತದೆ ಅನ್ನುವುದು ತಮಗೆ ಬಿಟ್ಟಿದ್ದು. ನಿಮ್ಮ ಅಧಿಕಾರೀ ವ್ಯಾಪ್ತಿಯೊಳಗೆ ಇದನ್ನು ಏನು ಮಾಡುವುದಕ್ಕೆ ಸಾಧ್ಯ ಎಂದು ಕಾಣುತ್ತದೆ ಅದನ್ನು ಮಾಡಿದರೆ ಈ ಸಭೆಯ ಸದಸ್ಯರ ಹಕ್ಕು ಭಾದ್ಯತೆಗೆ ಗೌರವವೂ ಬಂದಂತಾಗುತ್ತದೆ. ಇದು ಈ ಸಭೆಯ ಸದಸ್ಯರ ಹಕ್ಕು ಭಾದ್ಯತೆಯ ಪ್ರಶ್ನೆಯೂ ಹೌದು ಮತ್ತು ಸದನದ ಗೌರವವೂ ಹೌದು. ಆದುದರಿಂದ ಇದರ ಬಗ್ಗೆ ತಾವು ರಕ್ಷಣೆ ನೀಡಬೇಕು ; ಎಂದು ಹೇಳುತ್ತೇನೆ.

SRI B. B. SAYANAK.—I have given 6 to 7 call Attention notices and one of them pertains to a sheperd lady in Nangli who was made naked and raped. That question is also not answered. What is the use of putting questions? There is also another question regarding the escape of three persons from Hundalgi jail.

ಶ್ರೀ ಡಿ. ಕೆ. ನಾಯಕರ್.—ಇಲ್ಲಿಯವರೆಗೂ ಮಾನ್ಯ ಸದಸ್ಯರುಗಳು ತಮ್ಮ ಪ್ರಶ್ನೆಗಳಿಗೆ ಏನು ಉತ್ತರ ಪಡೆಯಬೇಕಾಗಿತ್ತೋ ಆ ಉತ್ತರಗಳನ್ನು ಪಡೆದಿದ್ದಾರೆ. ಆದರೆ ಈವೊತ್ತಿನ ದಿವಸ ೫ ಪ್ರಶ್ನೆಗಳು ಈ ಸಭೆಯಲ್ಲಿ ಬಂದಿದ್ದರೂ ಕೂಡ ಪ್ರಶ್ನೋತ್ತರ ಕಾಲ ಒಂದು ಗಂಟೆ ಏನಿದೆ ಆ ಒಂದು ಗಂಟೆಯನ್ನೂ ಕೂಡ ಅವರು ಉಪಯೋಗ ಮಾಡಿಕೊಂಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಈ ಒಂದು ಗಂಟೆಯಲ್ಲಿ ಪ್ರಶ್ನೋತ್ತರಗಳು ಮುಂಗಿದು ಕಾಲಿಂಗ್ ಅಟೆನ್‌ಷನ್‌ಗಳು ಮುಗಿದು, ಪ್ರಿವಿಲೇಜ್ ಕೊಶ್ಚನ್ ಕೂಡ ಮುಗಿದು ಈಗ ಈ ಒಂದು ಪ್ರಶ್ನೆಗೆ ಬಂದಿದ್ದೇವೆ. ಈ ಬಗ್ಗೆ ಎಷ್ಟು ಕೊಶ್ಚನ್‌ಗಳು ಬಂದಿವೆ, ಎಷ್ಟು ಕೊಶ್ಚನ್‌ಗಳಿಗೆ ಉತ್ತರಗಳನ್ನು ಕಳುಹಿಸಿದ್ದೀರಿ, ಇನ್ನು ಎಷ್ಟೋ ಕೊಶ್ಚನ್‌ಗಳು ಉಳಿದಿವೆ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಡಿ. ಕೆ. ನಾಯಕರ್.—ಇಲ್ಲಿಯವರೆಗೂ ಅಂದರೆ ಈ ಸಭೆ ಈ ತಿಂಗಳು ೧೦ನೇ ತಾರೀಖಿನ ಏನು ಶುರುವಾಯಿತು ಅವೊತ್ತಿನಿಂದ ಈವೊತ್ತಿನವರೆಗೂ ಅಂದರೆ ೧೯ನೇ ತಾರೀಖಿನವರೆಗೂ ಇದರ ಬಗ್ಗೆ ಏನೂ ತಕರಾರು ಇಲ್ಲದೆ ದಿವಸವೂ ಎಷ್ಟೆಷ್ಟು ಕಾಲಿಂಗ್ ಅಟೆನ್‌ಷನ್ ನೋಟೀಸುಗಳಿಗೆ ಉತ್ತರಗಳನ್ನು ಕೊಟ್ಟಿದ್ದೇವೆ ಎಂಬುದನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನನಗೆ ಬೇಕಾಗಿರುವುದು ಸದಸ್ಯರು ಕಳುಹಿಸಿದಂಥ ಪ್ರಶ್ನೆಗಳಿಗೆ ಎಷ್ಟು ಉತ್ತರಗಳು ಬಂದಿವೆ ? ಯಾವ ಮಂತ್ರಿಗಳು ಎಷ್ಟು ಪ್ರಶ್ನೆಗಳಿಗೆ ಉತ್ತರ ಕಳುಹಿಸಿದ್ದಾರೆ, ಇನ್ನು ಎಷ್ಟು ಪ್ರಶ್ನೆಗಳಿಗೆ ಉತ್ತರ ದೊರಕಿಸಿಕೊಡಬೇಕು ಅನ್ನುವುದು ಬೇಕು. ಇದರಲ್ಲಿ ಮಂತ್ರಿಗಳದ್ದು ತಪ್ಪು ಇರುತ್ತದೆಯೇ ಅಥವಾ ಲೆಜಿಸ್ಲೇಚರ್ ಸೆಕ್ರೆಟರಿಯೇಟ್‌ನಲ್ಲಿ ಏನಾದರೂ ತಪ್ಪು ಇರುತ್ತದೆಯೇ ಅನ್ನುವುದು ಗೊತ್ತಾಗುತ್ತದೆ ನನಗೆ ತಿಳಿದ ಮಟ್ಟಿಗೆ ಲೆಜಿಸ್ಲೇಚರ್ ಸೆಕ್ರೆಟೇರಿಯೇಟ್‌ನವರದ್ದು ತಪ್ಪೇನೂ ಇಲ್ಲ, ಮಂತ್ರಿಗಳು ಉತ್ತರಗಳನ್ನು ಕಳುಹಿಸುವುದೇ ಇಲ್ಲ ಎಂಬ ದೂರು ಇದೆ.

ಶ್ರೀ ಡಿ. ಕೆ. ನಾಯಕರ್ —ಮಾನ್ಯ ಸದಸ್ಯರ ತಿಳುವಳಿಕೆ ಸರಿಯಾದುದಲ್ಲ. ಏತಕ್ಕೆಂದರೆ ಕೆಲವು ವೇಳೆ ಪ್ರಶ್ನೆಗಳು ಬಂದಾಗ ಅದಕ್ಕೆ ಬೇಕಾಗಿರತಕ್ಕಂಥಾ ಮಾಹಿತಿಗಳನ್ನು ತರಿಸಿಕೊಳ್ಳಬೇಕಾದರೆ ಸ್ವಲ್ಪ ತಡವಾಗುತ್ತದೆ. ಈ ಬಗ್ಗೆ ಕ್ಯಾಬಿನೆಟ್‌ನಲ್ಲೂ ಕೂಡ ಚರ್ಚೆ ಮಾಡುತ್ತಿದ್ದೇವೆ. ಎಷ್ಟು ಪ್ರಶ್ನೆಗಳು ಬಂದಿವೆ, ಎಷ್ಟು ಉಳಿದಿವೆ, ಎಷ್ಟು ಪ್ರಶ್ನೆಗಳಿಗೆ ಉತ್ತರ ಕೊಡಬೇಕಾಗುತ್ತದೆ ಅನ್ನುವುದನ್ನು ಚರ್ಚೆ ಮಾಡುತ್ತೇವೆ. ಕೆಲವು ಸಂದರ್ಭದಲ್ಲಿ ಒಂದೇ ಊರಿನಲ್ಲಿರುವ ಪ್ರಶ್ನೆಗಳಿಗೆ ಉತ್ತರ ತರಿಸಲು ಸ್ವಲ್ಪ ಸಮಯ ಹಿಡಿಯುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.— ಮಾನ್ಯ ಮಂತ್ರಿಗಳು ಕ್ಯಾಬಿನೇಟ್‌ನಲ್ಲಿ ಇದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆಂದ ಹೇಳಿದರು. ಎಷ್ಟು ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದೇವೆ, ಎಷ್ಟು ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲ ಎಂಬುದನ್ನು ಕ್ಯಾಬಿನೇಟ್‌ನೊಳಗೆ ಚರ್ಚೆಮಾಡುತ್ತೇವೆಂದು ಏಕೆ ಬಹಿರಂಗಪಡಿಸಿರುವುದು ಒಂದು ಸಂತೋಷದ ವಿಷಯವಾಗಿರುತ್ತದೆ. ನನಗೆ ತಿಳಿದುಬಂದಿರುವ ಪ್ರಕಾರ ಪ್ರಶ್ನೆಗಳಿಗೆ ಉತ್ತರ ಕಳುಹಿಸಿಲ್ಲ ಇದರ ಬಗ್ಗೆ ಏನಂ ಉತ್ತರ ಹೇಳುತ್ತೀರಿ?.

ಶ್ರೀ ಡಿ ಕೆ. ನಾಯ್ಕರ್.— ಮಂತ್ರಿಗಳು ಉತ್ತರ ಕಳುಹಿಸುವುದಿಲ್ಲವೆಂದರೆ ಅರ್ಥವೇನು? ಇಲ್ಲಿಯವರೆಗೂ ಅಂದರೆ 19ನೇ ತಾರೀಖಿನವರೆಗೂ ಉತ್ತರಗಳನ್ನು ಕೊಟ್ಟಿದ್ದೇವೆ. ಮಂತ್ರಿಗಳು ಪ್ರಶ್ನೆಗೆ ಉತ್ತರಗಳನ್ನು ಕಳುಹಿಸದೆ ಅವು ಬಂದುವೆ.?

ಶ್ರೀ ಜೆ.ಎಲ್. ಕಬಾಡಿ — ಎಷ್ಟು ಪ್ರಶ್ನೆಗಳನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ, ಎಷ್ಟಕ್ಕೆ ಉತ್ತರ ಕೊಟ್ಟಿಲ್ಲ ಎಂಬುದನ್ನು ತಿಳಿಸಬೇಕು?

SRI T.R. SHAMANNA.— The questions and Calling Attention notices which were sent long back were not answered but questions sent some three days back have been replied. The question is whether it is proportionate to the time within which answers are replied. That is an important factor to be taken into account.

SRI B.B. SAYANAK.— I want to know how many questions are pending with the Government and in the Legislature Secretariat?

SRI M.S. KRISHNAN.— Rule No. 40 of the Rules of Procedure and Conduct of Business in the Karnataka Legislative Assembly says as follows —

"The Government shall send a reply to a question for oral answer within fifteen days from the date of its receipt by the Government :

Provided that the date of receipt for the purpose of this rule shall be the date on which the orders of the Speaker in regard to the admissibility of the question have been received by the Government ;

Provided further that where a reply to a question is delayed beyond the aforesaid fifteen days, the Government shall communicate to the Speaker the reasons for the delay and request that the question may be taken up for answer on a subsequent date not later than thirty days from the date of its receipt by the Government."

I would like to know how many questions have been sent and how many answers have been sent within 15 days ; In regard to how many questions, the Government has requested the Hon'ble Speaker that they want more time and even in regard to that, how many are still pending after 30 days. If this is answered, what the Hon'ble Minister says is correct or what we says is correct is very evident. The whole statement may be placed before the House.

MR. DEPUTY SPEAKER.— ಅಡಿಯರ್ಸ್ ಲೀಸ್ಟ್ ಈ ರೀತಿ ಇರುತ್ತದೆ.

(1)	Agricultural and Animal Husbandry ...	5	Questions
(2)	Commerce and Industries ...	6	,,
(3)	Education and Youth Services ...	7	,,
(4)	Finance ...	8	,,
(5)	Food and Forests ...	5	,,
(6)	General Administration ...	7	,,
(7)	Home ...	13	,,
(8)	Health and Municipal Administration ...	6	,,
(9)	Law and Parliamentary Affairs ...	3	,,
(10)	Planning ...	4	,,
(11)	Public Works and Electricity ...	25	,,
(12)	Revenue ...	44	,,
(13)	Rural Development and Co-operation ...	14	,,
(14)	Social Welfare and Labour ...	11	,,
	Total	158	,,

ಶ್ರೀ ಸಿ. ಬೈರೇಗೌಡ — ರೂಲ್ಸ್ ಪ್ರಕಾರವಾಗಿ 15 ದಿವಸದೊಳಗೆ ಉತ್ತರ ಕೊಡಬೇಕೆಂತಿರುತ್ತದೆ. ಕೊಡದೆ ಇದ್ದಪಕ್ಷದಲ್ಲಿ ಟೈಮ್ ಎಕ್ಸ್‌ಟೆನ್‌ಷನ್ ಕೇಳಬೇಕಾಗುತ್ತದೆ. ಅರೀತಿಯಾಗಿ ಇಷ್ಟು ಪ್ರಶ್ನೆಗಳಿಗೆ ಸರ್ಕಾರದವರು ಟೈಮ್ ಎಕ್ಸ್‌ಟೆನ್‌ಷನ್ ಕೊಡಬೇಕೆಂದು ಕೇಳಿದ್ದಾರೆ ಎಂಬುದನ್ನು ತಿಳಿಸಬೇಕು. ಇಲ್ಲಿ ಹಾಜರಿರುವ ಮಂತ್ರಿಗಳನ್ನು ನೋಡಿದರೆ ಒಂದು ಒಂದೂವರೆ ಸಂಖ್ಯೆಯಲ್ಲಿರುತ್ತಾರೆ, ಎಮರ್ಜೆನ್ಸಿ ಪ್ರಜಾಪ್ರಭುತ್ವ ರಕ್ಷಕರು ಎಂದು ಹೇಳುತ್ತೀರಿ. ಪ್ರಜಾಪ್ರಭುತ್ವ ರಕ್ಷಣೆ ಮಾಡತಕ್ಕಂಥ ಒಂದುವರೆ ಮಂತ್ರಿಗಳು ಬಹಳ ದೊಡ್ಡ ಮನಸ್ಸು ಮಾಡಿ ಕುಳಿತಿದ್ದಾರೆಂದು ಕಾಣುತ್ತದೆ.

MR. DEPUTY SPEAKER.— I cannot concede. I know their presence is required elsewhere. We heve got the Municipal Administration Bill the Hon'ble Minister incharge is here.

SRI D.B. KALMANKAR.— It is too much to use that word "Emergency" and attributing everything to that which is not good.

SRI M.S. KRISHNAN.— The number of questions for which answers have not been supplied to the Legislature Secretariat by the Government comes to nearly 158 and in the case of these three months, if 158 questions are yet to be answered, by the Ministers of the various Departments. I don't know whether it speaks of the efficiency or inefficiency, apathy or interest in regard to the questions that are raised by the Hon'ble Members. I am very clear in my mind that these questions which are put by the Hon'ble Members are not questions which will take lot of time to collect information and all that. Earlier also, the Hon'ble Speaker and the Hon'ble Deputy Speaker had instructed about the type of questions to be put. I am sure most of the Members are following it. Now 158 questions are still remaining without being answered. Is it not a height of irresponsibility on the part of the Ministry and what action the Hon'ble Deputy Speaker is going to take against those Ministers who have conducted themselves particularly, Revenue and Electricity, in that manner?

MR. DEPUTY SPEAKER.— When I have read out the list, I think it means I have understood it earlier and better than the Hon'ble Member.

ಶ್ರೀ ಎಚ್.ಟಿ. ಕೃಷ್ಣಪ್ಪ.— ಸರ್ಕಾರಕ್ಕೆ ಇಕ್ಕಟ್ಟಿನ ಪ್ರಶ್ನೆಗಳು ಯಾವುದಾದರೂ ಇದ್ದರೆ, ಸರ್ಕಾರಕ್ಕೆ ಬಹಳ ಜಟಿಲವಾಗಿ ಎದುರಿಸಲಾದಂತ ಪ್ರಶ್ನೆಗಳು ಯಾವುದಾದರೂ ಇತ್ತರೆ ಹೆದರಿಕೆಯಿಂದ ಉತ್ತರ ಕೊಡುತ್ತಿಲ್ಲ ಎನ್ನುವ ಭಾವನೆ ಬರುತ್ತದೆ. Certain questions are perhaps embarrassing to the Government. Therefore the Government may be reluctant and afraid of answering.

ಶ್ರೀ ಡಿ.ಕೆ. ನಾಯ್ಕರ್.— ಶ್ರೀ ಕೃಷ್ಣಪ್ಪನವರು ಹೇಳುವುದು ನೋಡಿದರೆ ಸರ್ಕಾರ ಅಂಜಿ ಕೊಂಡಿದೆ ಎನ್ನುವ ಅರ್ಥಬರುತ್ತದೆ ಆ ರೀತಿ ಹೇಳುವ ಮಾತು ತಪ್ಪು. ಇಷ್ಟು ದಿವಸಗಳಿಂದ ಉತ್ತರ ಕೊಡಲಿಲ್ಲವೇ?

ಶ್ರೀ ಎಂ ಎಸ್. ಕೃಷ್ಣನ್.— ಇಷ್ಟು ದಿವಸಗಳಿಂದ ಮಿಸ ಮಂತ್ರಿ ಕಾಫಿಫೋಸದ ಮೇಲೆ ರೈಡ್ಸ್ ಮಾಡಿರುವವರ ಸಂಖ್ಯೆ ಎಷ್ಟು ಎನ್ನುವುದನ್ನು ಕೇಳಿದರೆ It is not public interest to disclose ಎಂದು ಉತ್ತರ ಕೊಟ್ಟಿದ್ದಾರೆ. ಇದು ಏತಕ್ಕೆಂದು ಅರ್ಥವಾಗುತ್ತಿಲ್ಲ. ಪಾರ್ಲಿಮೆಂಟ್‌ನಲ್ಲಿ

ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದಾರೆಂದು ಹೇಳಿ ವಿವರ ಕೊಟ್ಟಿರುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರೆಂದು ಹೇಳುವುದಕ್ಕೆ ಏನು ಪಬ್ಲಿಕ್ ಇಂಟರೆಸ್ಟ್ ಧಕ್ಕೆ ಬರುತ್ತದೊ ಅರ್ಥವಾಗುವುದಿಲ್ಲ, ಉತ್ತರ ಕೊಡದೇಹೋದರೆ ಮಾನ್ಯ ಕೃಷ್ಣಪ್ಪನವರು ಹೇಳಿ ಹಾಗೆ ಅನುಮಾನಕ್ಕೆ ಅಸ್ಪದವಾಗುತ್ತದೆ. ಅನುಮಾನಕ್ಕೆ ಅಸ್ಪದ ಕೊಡದೆ ನೇರವಾಗಿ ಉತ್ತರ ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ.

SRI D.B. KALMANKAR.— It is very good of you to read out the list. There is nothing abnormal. The number of questions to be answered are not so many or in such a very big number and I think unnecessarily this is being raised and still there is time to furnish answers. We have got some more working days. These questions are likely to be answered in due course Therefore, there is nothing abnormal about it. I am a Member of this House for the second term.

SRI C. BYRE GOWDA.— He is adding fuel to the fire.

MR DEPUTY SPEAKER.— I would urge upon the Government to that little more importance is given to these and speed up answers. It is also not good that the delay is too much.

KARNATAKA MUNICIPALITIES (AMENDMENT) BILL 1976

Motion to Consider

[Debate Continued]

† ಶ್ರೀ ಶೀರಹಳ್ಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕಾನೂನು ಮತ್ತು ಪಾರ್ಲಿಮೆಂಟರಿ ವ್ಯವಹಾರಗಳ ಮಂತ್ರಿಗಳು ತಂದಿರತಕ್ಕ ಈ ಒಂದು ತಿದ್ದುಪಡಿ ಮಸೂದೆಯನ್ನು ನಾನು ಸಂಪೂರ್ಣವಾಗಿ ಬೆಂಬಲಿಸಿ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಸ್ಥಳೀಯ ಸಂಸ್ಥೆಗಳ ಅಧಿಕಾರದಲ್ಲಿ ಅನೇಕ ನ್ಯೂನತೆಗಳಿದ್ದವು. ಇನ್ನೂ ಇವೆ. ಸಮಗ್ರವಾಗಿ ಅದನ್ನು ಅಧ್ಯಯನ ಮಾಡಿ ತಂದಿರತಕ್ಕ ಕೆಲವು ತಿದ್ದುಪಡಿಗಳನ್ನು ನಾನು ಸಂಪೂರ್ಣವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ಕ್ಲಾಸ್ 18 (ಎ)ನಲ್ಲಿ ಅಲೋಯನ್ಸ್ ಟು ದಿ ಕಾನ್ಸಿಲರ್ಸ್ ಎಂದು ಹೇಳಿದ್ದೀರಿ. ಈಗಾಗಲೇ ಕಾನ್ಸಿಲರ್‌ಗಳಿಗೆ ಒಂದು ವಿಟಿಂಗ್ ಅಟೆಂಡ್ ಆದರೆ ಇಪ್ಪತ್ತು ಅಲೋಯನ್ಸ್ ಎಂದು ಕೊಡುತ್ತಿದ್ದಾರೆ. ಇದಲ್ಲದೆ ತಿಂಗಳಿಗೆ ಇಂತಿಷ್ಟು ಅಲೋಯನ್ ಎಂದು ತಿದ್ದುಪಡಿ ಮಾಡಲಿಕ ಕೊಡುತ್ತಿದ್ದೀರಿ. ಇಲ್ಲಿ ಪ್ರಶ್ನೆ ಏನು ಬರುತ್ತದೆಂದರೆ ಬಹಳ ಕಡಿಮೆ ಮಟ್ಟದ ಉತ್ಪನ್ನ ಇರತಕ್ಕ ಸ್ಥಳೀಯ ಸಂಸ್ಥೆಗಳಲ್ಲಿ ಹಾಸ್ ಟ್ಯಾಕ್ಸ್ ಕಲೆಕ್ಷ್ ಆಗಿರುವುದಿಲ್ಲ, ಆರಿಯರ್ಸ್ ಹಾಗೆಯೇ ನಿಂತಿರುತ್ತದೆ. ಅಂತಹ ಕಡೆಗಳಲ್ಲಿ ಸ್ವಲ್ಪ ಕಷ್ಟವಾಗುತ್ತದೆ. ಸದಸ್ಯರುಗಳಿಗೆ, ಅಧ್ಯಕ್ಷರಿಗೆ ಮತ್ತು ಉಪಾಧ್ಯಕ್ಷರುಗಳಿಗೆ ಅಲೋಯನ್ಸ್ ಕೊಡಬೇಕಾದುದು ನಿರ್ವಿವಾದ. ಕೊಡಲೇಬೇಕಾಗುತ್ತದೆ. ಏಕೆಂದರೆ ಅವರು ತಮ್ಮ ಎರಡೂ ವರೆ ಕಲಸಗಳನ್ನೂ ಬಿಟ್ಟು ಸ್ಥಳೀಯ ಸಂಸ್ಥೆಗಳ ಬಗ್ಗೆ ದುಡಿಯುತ್ತಾ ಇರುವುದರಿಂದ ಅವರಿಗೆ ಕೊಡುವುದನ್ನು ಒಪ್ಪಬೇಕಾಗುತ್ತದೆ. ಎರಡು ಸಾವಿರ ಮೂರು ಸಾವಿರ ಜನಸಂಖ್ಯೆ ಇರುವ ಕಡೆ ಇರತಕ್ಕ ನಗರ್ ಪುಟ್ಟ ಮುನಿಸಿಪಾಲಿಟಿಗಳಿಗೆ ಸದಸ್ಯರಿಗೆ ಕೊಡತಕ್ಕ ಅಲೋಯನ್ಸ್ ಹೆಚ್ಚಾಗುತ್ತದೋ ಏನೋ ಎಂದು ಸಂಶಯ ಬರುತ್ತಿದೆ. ನಂತರ ಸೆಕ್ಷನ್ 40ರಲ್ಲಿ ತಿದ್ದುಪಡಿ ಮಾಡಿದ್ದೀರಿ. ಇದು ಬಹಳ ಅಗತ್ಯವಾಗಿ ಆಗಬೇಕಾಗಿತ್ತು. ಒರಿಜಿನಲ್ ಆಕ್ಟ್‌ನಲ್ಲಿ ಸೆಕ್ಷನ್ 41ರಲ್ಲಿ ಒಬ್ಬ ಸದಸ್ಯ ರಾಜೀನಾಮೆ ಕೊಟ್ಟರೆ ಅಧ್ಯಕ್ಷರಿಗೆ ಕೊಡಬೇಕು, ರಾಜೀನಾಮೆ ಕೊಟ್ಟ ಕೂಡಲೇ ಅದು ಜಾರಿಗೆ ಬರುತ್ತದೆ ಎಂಬ ಕಲಮನ್ನು ನಮೂದಿಸಿದ್ದಾರೆ. ಎಷ್ಟೋ ಸಾರಿ ಯಾವುದೋ ಉದ್ವೇಗಕ್ಕೆ ಒಳಗೊಂಡು ರಾಜೀನಾಮೆ ಕೊಟ್ಟು ಕೊನೆಗೆ ಕೈ ಹಿಸುಕಿಕೊಳ್ಳುವಂತಹ ಪರಿಸ್ಥಿತಿ ಇತ್ತು. ಚುನಾವಣೆಯಲ್ಲಿ ಪ್ರಜಾಪ್ರಭುತ್ವದ ರೀತಿಯಲ್ಲಿ ಚುನಾಯಿತರಾಗಿರತಕ್ಕ ಸ್ಥಳೀಯ ಸಂಸ್ಥೆಗಳ